2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು.

ಸಿ.ಸಿ.ಸಂಖ್ಯೆ 4204/2023

ಫಿರ್ಯಾದುದಾರರುಃ- ಸರ್ಕಾರದ ಪರವಾಗಿ ಅಬಕಾರಿ ನಿರೀಕ್ಷಕರು

ವಿರುದ್ಧ

ಆರೋಪಿ/ತರುಃ- ಲೋಕೇಶ ಮತ್ತು ಇನ್ನೊಬ್ಬರು

**ದೋಷಾರೋಪಣೆ**

ಶ್ರೀಮತಿ ಸವಿತರಾಣಿ ಹೆಚ್.ವಿ., ಬಿ.ಎ.ಎಲ್. ಎಲ್.ಎಲ್.ಬಿ, 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವಃ

1. ಲೋಕೇಶ್ ಬಿನ್ ಸಣ್ಣಹನುಮಂತಪ್ಪ,
2. ನರಸಿಂಹ ಬಿನ್ ತಿಮ್ಮಯ್ಯ,

ಆರೋಪಿತರಿಬ್ಬರೂ ಎರೆಹಳ್ಳಿ, ಜಿಗಣೇಹಳ್ಳಿ ಅಂಚೆ ಕಡೂರು ತಾಲ್ಲೂಕು ವಾಸಿಗಳಾಗಿರುತ್ತಾರೆ.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಏನೆಂದರೆಃ

ವಿಧಾನಸಭಾ ಚುನಾವಣೆ - 2023 ರ ನಿಮಿತ್ತ ನೀತಿಸಂಹಿತೆ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ ಚಾಸಾ-5 ಮಮತಾ ಎನ್.ವಿ., ಅಬಕಾರಿ ನಿರೀಕ್ಷಕರು ದಿನಾಂಕ 03.05.2023 ರಂದು ರಾತ್ರಿ 8.40 ಗಂಟೆ ಸಮಯದಲ್ಲಿ ಇಲಾಖಾ ಸಿಬ್ಬಂದಿಗಳೊಂದಿಗೆ ಕೆಎ-18-ಜಿ-1122 ರ ಬೊಲೇರೋ ವಾಹನದಲ್ಲಿ ಸಖರಾಯಪಟ್ಟಣ - ಬಾಣಾವಾರ ರಸ್ತೆಯಲ್ಲಿ ದೇವನೂರು ಗ್ರಾಮದ ಕಡೆಯಿಂದ ಸಖರಾಯಪಟ್ಟಣ ಕಡೆಗೆ ಗಸ್ತು ಮಾಡುತ್ತಾ ಮಂದೇಹಳ್ಳಿ ಗೇಟ್ - ಗುಬ್ಬಿಹಳ್ಳಿ ಗೇಟ್ ಮಧ್ಯದಲ್ಲಿ ಬರುವ ಹಳ್ಳದ ಬಳಿ ರಸ್ತೆಯಲ್ಲಿ ಬರುತ್ತಿರುವಾಗ, ಸಖರಾಯಪಟ್ಟಣ ಕಡೆಯಿಂದ ಬಾಣಾವಾರದ ಕಡೆಗೆ ಪ್ಲಾಸ್ಟಿಕ್ ಚೀಲಗಳನ್ನು ಹೊಂದಿ 3 ದ್ವಿ ಚಕ್ರವಾಹನಗಳು ಒಂದರ ಹಿಂದೆ ಒಂದರಂತೆ ಬರುತ್ತಿದ್ದು, ಎದುರುಗಡೆಯಿಂದ ಬರುತ್ತಿದ್ದ ನಾವುಗಳು ಅನುಮಾನಸ್ಪದವಾಗಿ ಕಂಡ ಕಾರಣ ಸದರಿ ವಾಹನಗಳನ್ನು ಹಿಂಭಾಲಿಸಿ ಮಂಜಿಹಳ್ಳಿ ಗೇಟ್ನ ಪಕ್ಕದ ನೀರಿನ ಕಟ್ಟೆಯ ಬಳಿ ರಸ್ತೆ ಬದಿಯಲ್ಲಿ

ಎಲ್ಲಾ ವಾಹನಗಳನ್ನು ತಡೆದು ನಿಲ್ಲಿಸುವಂತೆ ಸೂಚಿಸಿದಾಗ, ಆರೋಪಿತರಾದ ನೀವು ಯಾವುದೇ ಪರವಾನಗಿಯನ್ನು ಹೊಂದದೆ ಅಕ್ರಮವಾಗಿ ಕೆಎ-18-ಇಬಿ-3043 ರ ಕಪ್ಪು ಬಣ್ಣದ ಹಿರೋ ಸ್ಪೆಂಡರ್ ಪ್ಲಸ್ ಬೈಕ್ನಲ್ಲಿ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ 90 ಎಂ.ಎಲ್. ನ 288 ರಾಜಾ ವಿಸ್ಕಿ ಮದ್ಯದ ಪೌಚುಗಳನ್ನು ಯಾವುದೇ ಪರವಾನಗಿಯನ್ನು ಹೊಂದದೇ ಮಾರಾಟ ಮಾಡಲು ದಾಸ್ತಾನು ಹೊಂದಿದ್ದಿರಿ. ಆದ್ದರಿಂದ ನೀವು **ಕರ್ನಾಟಕ ಅಬಕಾರಿ ಕಾಯ್ದೆಯ ಕಲಂ 11, 14, 32, 34, 38 (ಎ)** ರ ರೀತ್ಯಾ ಅಪರಾಧಗಳನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉ:

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉ:

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ: **27** ನೇ ದಿವಸ ಜುಲೈ ಮಾಹೆ 2024 ನೇ ಇಸವಿ**.**

ಸಹಿ/-

(ಸವಿತರಾಣಿ ಹೆಚ್.ವಿ.),
೨ ನೇ ಹೆಚ್ಚುವರಿ ಸಿವಿಲ್ ಮತ್ತು ಪ್ರದನ್ಯಾದಂ ಕಡೂರು.